**ದಿನಾಂಕಃ 13–03–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎನ್ ಆರ್ ವಕೀಲರಿಂದಃ**

ನನ್ನ ತಂದೆ ಹೆಸರು ಡಿ ಸಿ ನಂಜಪ್ಪ. ತಾಯಿ ಹೆಸರು ಸಿ ಮಂಜಮ್ಮ. ನನ್ನ ತಂದೆ–ತಾಯಿಗೆ 3 ಜನ ಮಕ್ಕಳು. ಅವರುಗಳೆಂದರೆ 1 ನೇ ಪ್ರೇಮಕುಮಾರಿ, 2 ನೇ ಬನಶಂಕರಿ, 3 ನೇ ಆಶೀರ್ವಾದ ಆಗಿರುತ್ತೇವೆ. 3 ಮಕ್ಕಳ ವಿವಾಹವೂ ಆಗಿದೆ. ನನ್ನ ತಂದೆ 2001 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿಯವರು ದಿಃ 25–8–2011 ರಂದು ತೀರಿಕೊಂಡಿರುತ್ತಾರೆ.

ನಾನು ನನ್ನ ಮದುವೆಯಾದಾಗಲಿಂದಲೂ ನನ್ನ ತಾಯಿಯವರು ಒಬ್ಬರೇ ಇದ್ದ ಕಾರಣ ಅವರ ಮನೆಯಲ್ಲಿ ಹಾಗೂ ನನ್ನ ಗಂಡನ ಮನೆಯಲ್ಲೂ ವಾಸವಾಗಿದ್ದೇನೆ. ನನ್ನ ತಂದೆಯವರು ಮೂಲತಃ ದಡೀಘಟ್ಟ ಗ್ರಾಮದವರ. ನನ್ನ ತಾಯಿ ಕುಂಬೇನಹಳ್ಳಿಯ ಗ್ರಾಮದವರು. ನನ್ನ ತಂದೆಯವರು ನನ್ನ ತಾಯಿಯವರನ್ನು ವಿವಾಹವಾಗಿ ಕುಂಬೇನಹಳ್ಳಿ ಗ್ರಾಮಕ್ಕೆ ಬಂದು ಸೇರಿಕೊಂಡರು.

ದಾವೆಯನ್ನು 5 ಸರ್ವೆ ನಂಬರ್ ಪಿತ್ರಾರ್ಜಿತ ಆಸ್ತಿಗೆ ಹಾಕಿರುತ್ತೇನೆ. ಅದರ ಸರ್ವೆ ನಂಬರ್ ಹೇಳಲು ಆಗುವುದಿಲ್ಲ ಮತ್ತು ಚಕ್ಕುಬಂದಿ ಹೇಳಲು ಆಗುವುದಿಲ್ಲ. 1 ರಿಂದ 7 ನೇ ಐಟಂ ನಂಬರ್ ಸ್ವತ್ತುಗಳು ನನ್ನ ತಾಯಿಯ ಮನೆಯ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳು ನನ್ನ ತಾಯಿಯವರ ಸ್ವಂತ ಆಸ್ತಿಗಳು ಎಂದರೆ ಹೌದು. ನನ್ನ ತಾಯಿಯವರನ್ನು 2 ನೇ ಪ್ರತಿವಾದಿ ಆಶೀರ್ವಾದನೇ ಅವರ ಬೇಕು ಬೇಡಗಳನ್ನು ನೋಡಿಕೊಂಡು, ಜೊತೆಯಲ್ಲಿ ಇರಿಸಿಕೊಂಡಿದ್ದ ಕಾರಣ, ನನ್ನ ತಾಯಿಯವರು ಅವರಿಗೆ ದಿಃ 25–8–11 ರಂದು ನೋಂದಾಯಿತ ದಾನಪತ್ರದ ಮೂಲಕ ದಾವಾ ಸ್ವತ್ತು 1 ರಿಂದ 6 ಆಸ್ತಿಗಳನ್ನು ಅವಳಿಗೆ ದಾನವಾಗಿ ನೀಡಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿಯವರು ಆ ರೀತಿ ಯಾವುದೇ ದಾನ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ , ಅವರು ಕೊಮಾ ಸ್ಥಿತಿಯಲ್ಲಿದ್ದರು, ಇವರು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ. ದಾವಾ 1 ರಿಂದ 6 ಐಟಂ ನಂಬರ್ ಸ್ವತ್ತುಗಳು ಈಗ ಯಾರ ಹೆಸರಿನಲ್ಲಿ ಬರುತಿದೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯ

ಹೆಸರಿನಲ್ಲಿ ಬರುತ್ತಿದೆ. ಈ ರೀತಿ 2011 ರಲ್ಲಿ ದಾನ ಪತ್ರ ಆದಾಗಿನಿಂದ 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲೆಗಳೆಲ್ಲಾ ಇರುತ್ತವೆಂದರೆ ಸುಳ್ಳು. ಈ ರೀತಿ ದಾನ ಪತ್ರ ಮಾಡಿಕೊಟ್ಟಿರುವುದು ನಮಗೆ ಯಾರಿಗೂ ತಿಳಿದಿಲ್ಲ, ಅವರು ದಾನ ಪತ್ರ ಮಾಡಿಕೊಟ್ಟ ಬಗ್ಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ಟಿ ವಿ ಚಾನೆಲ್ ನಲ್ಲಿ ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ಸಹಿ ಮಾಡುವಾಗಲೇ ಒಬ್ಬ ಮಹಿಳೆ ತೀರಿಕೊಂಡ ಬಗ್ಗೆ ಕಾರ್ಯಕ್ರಮ ಬರುತ್ತಿತ್ತು ಅದನ್ನು ನೋಡಿದಾಗ ಈ ಬಗ್ಗೆ ನನಗೆ ಗೊತ್ತಾಯಿತು. ಆ ಮಹಿಳೇ ನನ್ನ ತಾಯಿ ಆಗಿರುತ್ತಾರೆ ಎಂದು. ಈ ಬಗ್ಗೆ ನಿಮ್ಮ ಸಹೋದರಿ 2 ನೇ ಪ್ರತಿವಾದಿ ಆಶೀರ್ವಾದಳ ವಿರುದ್ದ ಏನಾದರೂ ಕಾನೂನು ಕ್ರಮ ಆಗಲೇ ಕೈ ಗೊಂಡಿದ್ದೀರಾ ಎಂದರೆ ಸಾಕ್ಷಿಯು ಊರಿನ ಹಿರಿಯರು ಎಲ್ಲಾ ಸೇರಿ ಯಾರು ಗಲಾಟೆ ಮಾಡಿಕೊಳ್ಳಬೇಡಿ ಬಗೆಹರಿಸೋಣ ಎಂದು ಹೇಳಿರುತ್ತಾರೆ. ಈ ರೀತಿ ಗ್ರಾಮಸ್ಥರು ಯಾರೂ ಏನು ಹೇಳಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಟಿ ವಿ ಚಾನೆಲ್ ನಲ್ಲಿ ಕಾರ್ಯಕ್ರಮ ಬಂದ ದಿನಾಂಕ 25–8–11 ಆಗಿರುತ್ತದೆಯೇ ಎಂದರೆ ಹೌದು. ಅದಾದ 11 ವರ್ಷಗಳ ನಂತರ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ಸುಳ್ಳು ದಾವೆ ತಂದು, ಕಾಳವಿಳಂಬದಿಂದ ಕೂಡಿದೆ, ವಜಾ ಗೊಳ್ಳಬೇಕು ಎಂದರೆ ಸರಿಯಲ್ಲ. ದಾನ ಪತ್ರದ ಅನುಸಾರ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನ 1 ರಿಂದ 6 ಐಟಂ ನಂಬರ್ ಸ್ವತ್ತುಗಳ ಆಸ್ತಿಗಳ ಹಕ್ಕುದಾರಿ ಮಾಲೀಕರು ಆಗಿದ್ದು ಸ್ವಾದೀನಾನುಭವದಲಿದ್ದಾರೆಂದರೆ ಸುಳ್ಳು.

ಆಶೀರ್ವಾದಳು 2001 ರಲಿ ವಿವಾಹ ಆಗಿರುತ್ತದೆ. ಆಶೀರ್ವಾದಳು ವಿವಾಹಕ್ಕೆ 1 ವರ್ಷದ ಮೊದಲು ಬೆಳಗೊಳದ ಖಾಸಗಿ ಶಾಲೆಯಲ್ಲಿ ಎಲ್ ಕೆ ಜಿ ಮತ್ತು ಯು ಕೆ ಜಿ ಶಿಕ್ಷಕಿ ಆಗಿದ್ದರು. ಅದೇ ರೀತಿ ಆಕೆಯು ಟೈಲರಿಂಗ್ ವೃತ್ತಿ ಮಾಡುತ್ತಾರೆಂದರೆ ಸುಳ್ಳು. ಆಶೀರ್ವಾದಳ ಗಂಡ ಎಲ್ ಐ ಸಿ ವ್ಯವಹಾರ ಮಾಡುವುದಿಲ್ಲ, ಹೊಟೆಲ್ ನಲ್ಲಿ ಕಲಸ ಮಾಡುತ್ತಾರೆ.

ದಾವಾ ಐಟಂ ನಂಬರ್ 8 ಆಸ್ತಿಯು ಆಶೀರ್ವಾದಳು ಸ್ವಂತ ಹಣದಲ್ಲಿ ಖರೀದಿಸಿರುವ ಸ್ವಂತ ಆಸ್ತಿ ಎಂದರೆ ಸುಳ್ಳು. 2 ನೇ ಪ್ರತಿವಾದಿ ವಿವಾಹ ಆದ ನಂತರ ದಾವಾ ಐಟಂ ನಂ 8 ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾಳೆ ಅದು ಅವಳ ಸ್ವಂತ ಆಸ್ತಿ ಎಂದರೆ ಸುಳ್ಳು . ದಾವಾ ಐಟಂ ನಂಬರ್ 9 ಆಸ್ತಿಯೂ ಸಹ 2 ನೇ ಪ್ರತಿವಾದಿಯು ತನ್ನ ಸ್ವಂತ ಹಣದಲ್ಲಿ ಕ್ರಯಕ್ಕೆ ಖರೀದಿ ಮಾಡಿದ ಆಸ್ತಿ ಎಂದರೆ ಸುಳ್ಳು, ನಾವು ಎಲ್ಲರೂ ಸೇರಿ ಹಣ ಕೊಟ್ಟಿದ್ದೇವೆ.

8 ಮತ್ತು 9 ನೇ ಕ್ರಮಾಂಕದ ಆಸ್ತಿಗಳು 2 ನೇ ಪ್ರತಿವಾದಿಯ ಸ್ವಂತ ದುಡಿಮೆಯ ಸ್ವಂತ ಆಸ್ತಿ ಅದ್ದರಿಂದ ಅವುಗಳಲ್ಲಿ ಸಹ ನಮಗೆ ಯಾವುದೇ ಭಾಗಂಶದ ಹಕ್ಕು ಇಲ್ಲವೆಂದರೆ ಸರಿಯಲ್ಲ. 8 ಮತ್ತು 9 ನೇ ಕ್ರಮಾಂಕದ ಆಸ್ತಿಗಳನ್ನು ನಮ್ಮ ತಾಯಿಯವರಿಗೆ ಸೇರಿರುವ 1 ರಿಂದ 6 ಕ್ರಮಾಂಕಗಳ ಆಸ್ತಿಗಳ ಉತ್ಪತ್ತಿಯಲ್ಲಿ ಖರೀದಿ ಮಾಡಲಾಯಿತು , ಆದ್ದರಿಂದ 2 ನೇ ಪ್ರತಿವಾದಿಯ ಸ್ವಂತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

ನಾವು ಯಾವುದೇ ಆದಾಯದ ನಮ್ಮ ಹಣವನ್ನು 2 ನೇ ಪ್ರತಿವಾದಿಗೆ ಆಸ್ತಿ ಖರೀದಿ ಮಾಡಲು ಕೊಟ್ಟಿಲ್ಲ, ನಾವು ಸುಳ್ಳು ಹೇಳುತ್ತಿದ್ದೇವೆಂದರೆ ಸರಿಯಲ್ಲ . 1 ರಿಂದ 6 ಜಮೀನುಗಳು ನೀರಾವರಿ ಆಸ್ತಿಗಳಲ್ಲ, ಮಳೆ ಆಶ್ರಯದ ಭೂಮಿಗಳು ಅವುಗಳಿಂದ ಯಾವುದೇ ಉತ್ಪತ್ತಿ ಇಲ್ಲವೆಂದರೆ ಸರಿಯಲ್ಲ. ಬೋರ್ವೆಲ್ ಸಹ ಇರುತ್ತದೆ. 1 ರಿಂದ 6 ಆಸ್ತಿಗಳಲ್ಲಿ ಬೋರ್ವೆಲ್ ಇಲ್ಲ ಹಾಗೂ ಯಾವುದೇ ಆದಾಯ ಇಲ್ಲವೆಂದರೆ ಸುಳ್ಳು.

ದಾವಾ ಆಸ್ತಿಗಳು 1 ರಿಂದ 6 ಮತ್ತು 8 ಹಾಗೂ 9 ಆಸ್ತಿಗಳು 2 ನೇ ಪ್ರತಿವಾದಿ ಆಶೀರ್ವಾದಳ ಹೆಸರಿನಲ್ಲೇ ಇದೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಮಾಡಿಕೊಂಡಿರುತ್ತಾರೆ. ನನ್ನ ತಾಯಿಯವರ ಆಸ್ತಿಗಳು ಅವರು ಸ್ವಂತ ಆಸ್ತಿಗಳಾಗಿದ್ದು ಈಗಾಗಲೇ ಅವರು ದಾನ ಮಾಡಿರುವ ಕಾರಣದಿಂದ ಸದರಿ ಆಸ್ತಿಗಳಲ್ಲಿ ನಮಗೆ ಯಾರಿಗೂ ಸಹ ಹಕ್ಕು ಇರುವುದಿಲ್ಲವೆಂದರೆ ಸುಳ್ಳು. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ, ಬದಲಿಗೆ 2 ನೇ ಪ್ರತಿವಾದಿಯ ಸ್ವಂತ ಆಸ್ತಿಗಳು ಎಂದರೆ ಸುಳ್ಳು.

ದಾವಾ 1 ರಿಂದ 10 ದಾಖಲೆಗಳ ಮೂಲ ದಾಖಲೆಗಳನ್ನು ಹಾಜರು ಮಾಡಿಲ್ಲ, ಕೇವಲ ಪಹಣಿಗಳನ್ನು ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ 3 ನೇ 1 ಭಾಗಾಂಶದ ಹಕ್ಕು ಇರವುದಿಲ್ಲವೆಂದರೆ ಸರಿಯಲ್ಲ. ನನ್ನ ತಾಯಿ ಮಂಜಮ್ಮ ರವರ ಅಂತ್ಯಕ್ರಿಯೆಗಳನ್ನು ಮೊದಲಾದ ಖರ್ಚು ವೆಚ್ಚಗಳನ್ನು ಸಹ 2 ನೇ ಪ್ರತಿವಾದಿಯೇ ಮಾಡಿರುತ್ತಾರೆಂದರೆ ಸುಳ್ಳು. ಸುಳ್ಳು ಅಂಶಗಳ ಮೇಲೆ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ